ಶ್ರೀ ಜಗದೀಶ್ ಶೆಟ್ಟರ್:– Royalty ಗಾಗಿ 4,000 ಕೋಟಿ ಬಜೆಟ್ ಇಟ್ಟುಕೊಂಡಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಆಂಧ್ರ ಮತ್ತು ಕರ್ನಾಟಕಕ್ಕಿರುವ ಒಂದೇ ವ್ಯತ್ಯಾಸವೆಂದರೆ ನಮ್ಮಲ್ಲಿ ನದಿ ತೀರಗಳು ಕಡಿಮೆಯಿದ್ದು ಅಲ್ಲಿ ಉದ್ದ ಇದೆ, ಇಲ್ಲಿಂದ ಹೋಗುವಂಥ ಮರಳೆಲ್ಲಾ ಅಲ್ಲೇ stock ಆಗಿರುತ್ತದೆ ಹಾಗಾಗಿ ಅವರಿಗೆ ಅವಕಾಶವಾಗುತ್ತಿದೆ.

(ಗೊಂದಲ)

ಅಧ್ಯಕ್ಷರು:– ಈಗ ಹದಿನಾಲ್ಕನೇ ವಿಧಾನಸಭೆಯ ಆರನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಕೊಡುತ್ತಿದ್ದೇನೆ.

11. ಹದಿನಾಲ್ಕನೇ ವಿಧಾನಸಭೆಯ ಆರನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹದಿನಾಲ್ಕನೇ ವಿಧಾನಸಭೆಯ ಆರನೇ ಅಧಿವೇಶನವು ದಿನಾಂಕ 02ನೇ ಫೆಬ್ರವರಿ 2015 ರಿಂದ 13.02.2015 ರವರೆಗೆ ಸಮಾವೇಶಗೊಂಡು ಒಟ್ಟು 10 ದಿನಗಳಲ್ಲಿ ಸುಮಾರು **52 ಗಂಟೆ 30** ನಿಮಿಷಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ದಿನಾಂಕ 02ನೇ ಫೆಬ್ರವರಿ, 2015ರ ಸೋಮವಾರದಂದು ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಪ್ರಸ್ತಾವದ ಮೇಲೆ 23 ಗಂಟೆ 31 ನಿಮಿಷಗಳ ಚರ್ಚೆಯಾಗಿದ್ದು, 26 ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿರುತ್ತಾರೆ ಮತ್ತು ದಿನಾಂಕ: 13.02.2015 ರಂದು ಮಾನ್ಯ

ಮುಖ್ಯಮಂತ್ರಿಯವರು ಚರ್ಚೆಗೆ ಉತ್ತರಿಸಿದ ನಂತರ ವಂದನಾ ನಿರ್ಣಯದ ಪ್ರಸ್ತಾವನೆಯು ಅಂಗೀಕೃತವಾಗಿರುತ್ತದೆ.

ಇತ್ತೀಚೆಗೆ ನಿಧನ ಹೊಂದಿದ ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದ ಡಾ॥ ಸಿ.ಎ. ರಾಮೇಶ್ವರ ಠಾಕೂರ್, ಕೇಂದ್ರದ ಮಾಜಿ ಸಚಿವೆಯಾಗಿದ್ದ ಡಾ॥ ಸರೋಜಿನಿ ಮಹಿಷಿ, ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ, ಬಾಳಾ ಸಾಹೇಬ ಸಾರವಾಡಿ, ರಘುನಾಥ ವಿಠಲ್‌ರಾವ್ ಕದಂ, ಸೀತಾರಾಮ ವಾಸುದೇವ ನಾಯಕ, ನಾಗಪ್ಪ ನಿಂಗಪ್ಪ ಬೆಲ್ಲದ್, ಪ್ರೋ: ಪಿ.ಎಂ. ಚಿಕ್ಕಬೋರಯ್ಯ, ಆರ್.ಎಸ್. ಪಾಟೀಲ್, ನಾರಾಯಣರಾವ್ ಮನಹಳ್ಳಿ ಹಾಗೂ ಖ್ಯಾತ ವ್ಯಂಗ್ಯ ಚಿತ್ರಕಾರರಾಗಿದ್ದ ಆರ್.ಕೆ. ಲಕ್ಷ್ಮಣ್ ಅವರುಗಳು ನಿಧನ ಹೊಂದಿರುವ ಬಗ್ಗೆ ಸದನದಲ್ಲಿ ಸಂತಾಪ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

ಈ ಅವಧಿಯಲ್ಲಿ 32 ವಾರ್ಷಿಕ ವರದಿ ಮತ್ತು 32 ಲೆಕ್ಕಪರಿಶೋಧನಾ ಸೇರಿದಂತೆ 64 ಕಾಗದ ಪತ್ರಗಳನ್ನು ಹಾಗೂ 06 ಅಧಿಸೂಚನೆಗಳನ್ನು ಸಭೆಯ ಮುಂದಿಡಲಾಗಿದೆ.

ಅರ್ಜಿಗಳ ಸಮಿತಿಯ 2014–15 ನೇ ಸಾಲಿನ ಹದಿನೆಂಟನೇ ವರದಿ ಮತ್ತು ಸರ್ಕಾರಿ ಭರವಸೆಗಳ ಸಮಿತಿಯ ಮೂರನೇ ವರದಿಯನ್ನು ಸದನಕ್ಕೆ ಒಪ್ಪಿಸಲಾಯಿತು.

ಭಾರತ ಸಂವಿಧಾನದ 151 (2)ನೇ ಅನುಚ್ಛೇದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ 2013–14 ನೇ ಸಾಲಿನ ಲೆಕ್ಕಪತ್ರಗಳ (1 ಮತ್ತು 2) ಮತ್ತು ಧನವಿನಿಯೋಗ ಮೇಲಿನ ವರದಿಗಳು

ಹಾಗೂ

31ನೇ ಮಾರ್ಚ್, 2014ಕ್ಕೆ ಕೊನೆಗೊಂಡ ವರ್ಷಕ್ಕೆ ಸಂಬಂಧಿಸಿದಂತೆ (ಅ) ಆರ್ಥಿಕ ವಲಯ ವರದಿ (ಸಂಖ್ಯೆ–8), (ಆ) ರಾಜಸ್ವ ವಿಭಾಗ ವರದಿ

(ಸಂಖ್ಯೆ–7), (ಇ) ಸಾರ್ವಜನಿಕ ವಲಯ ಉದ್ಯಮಗಳ ವರದಿಯನ್ನು ಸದನಕ್ಕೆ ಒಪ್ಪಿಸಲಾಯಿತು.

ಪ್ರಸಕ್ತ ಅಧಿವೇಶನದಲ್ಲಿ **ಎರಡು** ವಿಧೇಯಕಗಳನ್ನು ಮಂಡಿಸಲಾಗಿರುತ್ತದೆ ಹಾಗೂ **ಮೂರು** ವಿಧೇಯಕಗಳನ್ನು ಅಂಗೀಕರಿಸಲಾಗಿರುತ್ತದೆ.

ದಿನಾಂಕ: 20.12.2014 ರಂದು ಬೆಳಗಾವಿಯಲ್ಲಿ ನಡೆದ ಐದನೇ ಅಧಿವೇಶನದಲ್ಲಿ ಮಂಡಿಸಲಾಗಿದ್ದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, 2014 ನ್ನು ಹಿಂಪಡೆಯಲಾಗಿರುತ್ತದೆ.

ಈ ಅಧಿವೇಶನದಲ್ಲಿ ನಿಯಮ 60 ರ ಮೇರೆಗೆ **07** ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ **03** ಸೂಚನೆಗಳನ್ನು ಪ್ರಾಸ್ತಾವಿಕವಾಗಿ ಪ್ರಸ್ತಾಪಿಸಿದ ನಂತರ ಅವುಗಳನ್ನು ನಿಯಮ 69 ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆಗೆ ಪರಿವರ್ತಿಸಿ ಚರ್ಚಿಸಲಾಗಿದ್ದು, ಉಳಿದ **04** ಸೂಚನೆಗಳನ್ನು ತಿರಸ್ಕರಿಸಲಾಗಿರುತ್ತದೆ. ನಿಯಮ 69 ರಡಿ 07 ಸೂಚನೆಗಳನ್ನು ಸ್ವೀಕರಿಸಲಾಗಿದೆ. ಆ ಪೈಕಿ 03 ಸೂಚನೆಗಳ ಮೇಲೆ ಚರ್ಚೆಯಾಗಿ ಸರ್ಕಾರದಿಂದ ಉತ್ತರಿಸಲಾಗಿದೆ.

ಈ ಅವಧಿಯಲ್ಲಿ ಒಟ್ಟು **2647** ಪ್ರಶ್ನೆಗಳ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ **2133** ಸೂಚನೆಗಳನ್ನು ಅಂಗೀಕರಿಸಲಾಗಿರುತ್ತದೆ. ಇವುಗಳ ಪೈಕಿ ಸದನದಲ್ಲಿ ಉತ್ತರಿಸುವ **135** ಪ್ರಶ್ನೆಗಳು ಹಾಗೂ ಲಿಖಿತ ಮೂಲಕ ಉತ್ತರಿಸುವ **1997** ಪ್ರಶ್ನೆಗಳಾಗಿರುತ್ತವೆ. ಸದನದಲ್ಲಿ ಉತ್ತರಿಸಲು ತೀರ್ಮಾನಿಸಲಾಗಿದ್ದ **135** ಪ್ರಶ್ನೆಗಳ ಪೈಕಿ **126** ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ **1997** ಪ್ರಶ್ನೆಗಳ ಪೈಕಿ **1783** ಪ್ರಶ್ನೆಗಳ ಉತ್ತರಗಳನ್ನು ಸರ್ಕಾರದಿಂದ ಸ್ವೀಕರಿಸಲಾಗಿರುತ್ತದೆ. **22** ಪ್ರಶ್ನೆಗಳು ತಿರಸ್ಕೃತಗೊಂಡಿರುತ್ತವೆ ಹಾಗೂ **493** ಪ್ರಶ್ನೆಗಳ ಸೂಚನೆಗಳು ಹೆಚ್ಚುವರಿಯಾಗಿರುತ್ತವೆ.

ಸದರಿ ಅಧಿವೇಶನದಲ್ಲಿ **37** ಸೂಚನೆಗಳನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

ನಿಯಮ 73 ರ ಗಮನ ಸೆಳೆಯುವ ಸೂಚನೆಗಳಲ್ಲಿ **128** ಸೂಚನಾ ಪತ್ರಗಳನ್ನು ಸ್ವೀಕರಿಸಲಾಗಿದ್ದು, ಈ ಪೈಕಿ **02** ಸೂಚನೆಗಳು ತಿರಸ್ಕೃತಗೊಂಡಿರುತ್ತವೆ. ಈ ಪೈಕಿ **26** ಸೂಚನೆಗಳ ಕುರಿತು ಸನದಲ್ಲಿ ಚರ್ಚೆಯಾಗಿರುತ್ತವೆ. 351 ರ ನಿಯಮದಡಿಯಲ್ಲಿ ಒಟ್ಟು **104** ಸೂಚನೆಗಳು ಸ್ವೀಕೃತವಾಗಿದ್ದು, **90** ಸೂಚನೆಗಳು ಅಂಗೀಕೃತಗೊಂಡಿರುತ್ತವೆ. ಈ ಪೈಕಿ **75** ಸೂಚನೆಗಳಿಗಗೆ ಸರ್ಕಾರದಿಂದ ಉತ್ತರಗಳನ್ನು ಸ್ವೀಕರಿಸಲಾಗಿರುತ್ತದೆ.

ಸದನದ ಎಲ್ಲಾ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ನನ್ನೊಂದಿಗೆ ಸಹಕರಿಸಿದ ಸಭಾನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರಿಗೆ, ಮಾನ್ಯ ಉಪ ಸಭಾಧ್ಯಕ್ಷರಿಗೆ, ಮಾನ್ಯ ಸಚಿವ ಸಂಪುಟದ ಸದಸ್ಯರುಗಳಿಗೆ, ಮಾನ್ಯ ಜನತಾದಳ (ಎಸ್) ಶಾಸಕಾಂಗ ಪಕ್ಷದ ನಾಯಕರಿಗೆ, ಸದನದ ಎಲ್ಲಾ ಮಾನ್ಯ ಸದಸ್ಯರಿಗೆ, ಸದನದ ಕಾರ್ಯಕಲಾಪಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಲು ಹಾಗೂ ಪತ್ರಿಕೆಗಳಲ್ಲಿ ಪ್ರಕಟಿಸಲು ಸಹಕರಿಸಿದ ಎಲ್ಲಾ ಮಾಧ್ಯಮ ಹಾಗೂ ಪತ್ರಿಕಾ ಪ್ರತಿನಿಧಿಗಳಿಗೆ, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ, ನೌಕರ ವರ್ಗದವರಿಗೆ, ಹಾಗೂ ಕೊನೆಯದಾಗಿ ವಿಧಾನಸಭೆ ಸಚಿವಾಲಯದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಎಲ್ಲಾ ವಿಚಾರದಲ್ಲಿಯೂ ಯಾವುದೇ ಗಲಾಟೆ, ಗೊಂದಲವಿಲ್ಲದೆ ಸದನ ಸುಸೂತ್ರವಾಗಿ ನಡೆಸಿದ್ದೀರಿ, ಒಂದೆರಡು ಪ್ರಕರಣಗಳನ್ನು ಬಿಟ್ಟರೆ, ಎಲ್ಲಾ ಪ್ರಕರಣಗಳಲ್ಲಿಯೂ ಕೂಡಾ ಚೆನ್ನಾಗಿ ಸದನವನ್ನು ನಡೆಸಿಕೊಟ್ಟಿದ್ದೀರಿ. ಬಹಳ ಮುಖ್ಯವಾಗಿ ಅಧ್ಯಕ್ಷರಾಗಿ

ತಾವು ಆಸಕ್ತಿ ತೆಗೆದುಕೊಂಡು ಅರಣ್ಯದಲ್ಲಿ ವಾಸಿಸುವಂತಹವರಿಗೆ ರಕ್ಷಣೆ ಸಿಕ್ಕಿದ್ದರೆ ಆ ಕೀರ್ತಿ ಅಧ್ಯಕ್ಷರಿಗೆ ಹೋಗಬೇಕು.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನಗುಮುಖದಿಂದ ಸದನವನ್ನು ನಡೆಸಿಕೊಟ್ಟಿದ್ದೀರಿ. ಬಡವರಿಗೆ, ರೈತರಿಗೆ, ಕಾರ್ಮಿಕರಿಗೆ, ಗ್ರಾಮೀಣ ಪ್ರದೇಶದವರಿಗೆ . . .

ಅಧ್ಯಕ್ಷರು:– ಅದಕ್ಕೆ ನಮ್ಮ ಕಾನೂನು ಸಚಿವರಿಗೆ ವಿಶೇಷವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನನ್ನ ಎರಡು ಆಸೆಗಳನ್ನೂ ಕೂಡಾ ತಾವು ಈಡೇರಿಸಿಕೊಟ್ಟಿದ್ದೀರಿ.

ಶ್ರೀ ಜಗದೀಶ ಶೆಟ್ಟರ್:– Direction ಆಗಿದೆ, implement ಆಗಬೇಕು.

ಅಧ್ಯಕ್ಷರು:– ಅರಣ್ಯಕ್ಕೆ ಸಂಬಂಧಿಸಿದಂತೆ 50 ಮತ್ತು 53 ರನ್ನು ತಾವು ಮಾಡ ಕೊಟ್ಟಿದ್ದೀರಿ. ಮುಂದಿನ ದಿವಸದಲ್ಲಿ, ನಾನು ಒಂದು ಮಾತನ್ನು ಹೇಳಬೇಕೆಂದು ಇದ್ದೆ. ಎಲ್ಲಾ ಸ್ನೇಹಿತರು ಹೋಗಿ ಬಿಟ್ಟಿದ್ದಾರೆ. ಎಲ್ಲರಿಗೂ ಪತ್ರವನ್ನು ಕಳುಹಿಸುತ್ತೇನೆ. ಏಕೆಂದರೆ ಪ್ರಾರಂಭಿಕ ಅರಣ್ಯ ಹಕ್ಕು ಕಾನೂನಿನ ಪ್ರಕಾರ, ತುಕಾರಾಂ ಸೇರಿದಂತೆ ಇನ್ನು ಅನೇಕ ಸದಸ್ಯರು ಹೇಳುತ್ತಿದ್ದರು, ಇನ್ನೂ committee ರಚನೆಯಾಗಿಲ್ಲ. ಆದುದರಿಂದ ದಯವಿಟ್ಟು ಸರ್ಕಾರದಿಂದ ಒಂದು ಸುತ್ತೋಲೆ ಕಳುಹಿಸಿ, ಎಲ್ಲೆಲ್ಲಿ ಆಗಿಲ್ಲ ತಕ್ಷಣ ಗ್ರಾಮ ಸಮಿತಿಗಳನ್ನು ರಚನೆ ಮಾಡುವುದು, ಅವರಿಗೆ ಮಾರ್ಗದರ್ಶನ ಮಾಡುವುದು. ಇದನ್ನು ಮಾಡಿದರೆ ಒಂದು ದೊಡ್ಡ ಭೂಮಿಯ ಹೋರಾಟಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಆಗುತ್ತದೆ. ಎಲ್ಲರಿಗೂ ತಪ್ಪದೆ ನಾನೊಂದು ಪತ್ರವನ್ನು ಕಳುಹಿಸಿಕೊಡುತ್ತೇನೆ. ಅದರ ಜೊತೆಗೆ 'ಕುವೆಂಪು ನುಡಿತೋರಣ' ಪುಸ್ತಕ ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಬಡಬಗ್ಗರಿಗೆ ಕಂದಾಯ ಗ್ರಾಮಗಳನ್ನು ಮಾಡಿಕೊಡಿ.

ಅಧ್ಯಕ್ಷರು:– ಮಾಡುತ್ತಾರೆ, ಬಿಡಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನೀವು ಇದು ನನ್ನ ಜೀವನದ ಕೊನೆಯ ಆಸೆ ಎಂಬ ಮಾತನ್ನು ಹೇಳಿದ ಮೇಲೆ ನಾವು ತೀರ್ಮಾನವನ್ನು ಮಾಡಿದೆವು. ಯಾವುದೇ ರೀತಿಯಲ್ಲಾದರೂ ಕೂಡ ಇದಕ್ಕೆ ಪರಿಹಾರ ಕಂಡುಹಿಡಿಯಬೇಕೆಂಬ ದೃಷ್ಟಿಯಿಂದ ಇವೆಲ್ಲಾ ಹೊಸ ಬದಲಾವಣೆಗಳನ್ನು ತರುವ ಪ್ರಯತ್ನವನ್ನು ಮಾಡಿರುತ್ತೇವೆ. ನಿಮ್ಮ ಆಸೆಯನ್ನು ಪೂರೈಸುವುದೇ ನಮ್ಮ ಹಂಬಲ. ಅದರ ಮುಖೇನ ರಾಜ್ಯದ ಸಾವಿರಾರು, ಲಕ್ಷಾಂತರ ಕುಟುಂಬಗಳಿಗೆ ಸಹಾಯವಾಗುತ್ತದೆಂಬ ವಿಶ್ವಾಸ ನಮಗಿದೆ.

ಅಧ್ಯಕ್ಷರು:– ಖಂಡಿತಾ, ನಿಮಗೆ ವಿಶೇಷವಾದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಮ್ಮ ಕಂದಾಯ ಸಚಿವರನ್ನು ಜೊತೆಗಿಟ್ಟುಕೊಂಡು, ಇದಕ್ಕೆ ಒಂದು ಉತ್ತಮವಾದ ತೀರ್ಮಾನವನ್ನು ಮಾಡಿಕೊಟ್ಟಿದ್ದೀರಿ. ಜನರ ಪರವಾಗಿ ನಿಮಗೆ ವಿಶೇಷವಾದ ಕೃತಜ್ಞತೆಗಳು.

ಶ್ರೀ ಆರ್. ಅಶೋಕ್:– ಮಾನ್ಯ ಜಯಚಂದ್ರರವರಿಗೆ ಅಭಿನಂದನೆಗಳು.

ಅಧ್ಯಕ್ಷರು:– ಈಗ ಸದನವನ್ನು ರಾಷ್ಟ್ರಗೀತೆಯೊಂದಿಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಈ ಹಂತದಲ್ಲಿ ರಾಷ್ಟ್ರಗೀತೆಯೊಂದಿಗೆ ಸದನವನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಲಾಯಿತು. ಸದನವು ಸಂಜೆ 06 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡಿತು.)